10.50 ಎ.ಎಂ

ಮಾನ್ಯ ಅಧ್ಯಕ್ಷರೇ ಸೆಕ್ಷನ್ 310 ಸಚಕ್ಲಾಸ್ (5) ರಲ್ಲಿ "ಜಿಲ್ಲಾಪಂಚಾಯತ್ ಅಧ್ಯಕ್ಷರು, ಜಿಲ್ಲಾ ಯೋಜನ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು ಎಂದಿದೆ ನನ್ನ ಪ್ರಕಾರ ಇದರ ವರ್ಷನ್ Zilla Parishat President will also be the President of the Planning Committee." ಅಂತ ಇರಬೇಕಾಗಿತ್ತು ಆದರೆ ಇದರ ಇಂಗ್ಲೀಷ್ ವರ್ಷನ್ ನೋಡಿದರೆ, ಇದು ಸಂಪೂರ್ಣವಾಗಿ ತದ್ವಿರುದ್ದವಾಗಿದೆ. ಸೆಕ್ಷನ್ 310 ಸಬ್ ಕ್ಲಾಸ್ 5. "The Chairman of the District Planning Comittee shall be chosen in the manner as may be prescribed" ಅಂತ ಇದೆ. ಕನ್ನಡದೊಳಗೆ ಜಿಲ್ಲಾಪರಿಷತ್ತಿನ ಅಧ್ಯಕ್ಷರು ಜಿಲ್ಲಾ ಯೋಜನೆಯ ಅಧ್ಯಕ್ಷರಾಗಿರತಕ್ಕದ್ದು. ಎಂದರೆ ಇಂಗ್ಲೀಷ್‌ನಲ್ಲಿ, The Chairman of the District Planning Comittee shall be chosen in the manner as may be prescribed.' ಅಂತ ಇದೆ. ಇದು ಅಕಸ್ಮಿಕವಾದ ತಪ್ಪು ಎಂದು ನಾನು ಭಾವಿಸಿಕೊಳ್ಳುವುದಿಲ್ಲ. ಅಥವಾ ಪ್ರಜ್ಞಾಪೂರ್ವಕವಾಗಿ ಆಗಿದೆ ಎಂದು ಕೂಡ ನಾನು ಭಾವಿಸಿಕೊಳ್ಳುವುದಿಲ್ಲ. I should say, it is only due to the negligence on the part of the concerned. ಇಷ್ಟಕ್ಕೆ ಇದು ನಿಲ್ಲಲಿಲ್ಲ.

ಶ್ರೀ ಎಂ.ವೀರಪ್ಪ ಮೊಯ್ಲಿ : ಮಾನ್ಯ ಉಪಾಧ್ಯಕ್ಷರೇ, ಅದು ಇಂಗ್ಲೀಷ್‌ನಲ್ಲಿ ಏನು ಇದೆ ಅದು ಸರಿ. ಯಾಕೆಂದರೆ, ನಮ್ಮ ಸಂವಿಧಾನದ ತಿದ್ದುಪಡಿ ಏನಿದೆ, ಅದು ಇಂಗ್ಲೀಷ್‌ನ ಮಾದರಿಯಲ್ಲಿದ್ದ ಪ್ರಕಾರವೇ ಇದೆ. ನಾವು ಸಂವಿಧಾನಕ್ಕೆ ವಿರುದ್ಧವಾಗಿ ಏನೂ ಹೇಳುವುದಕ್ಕಾಗುವುದಿಲ್ಲ. ಕನ್ನಡದ್ದು ನಾವು ಸರಿಮಾಡೋಣ. ನಮಗೆ ಬದಲಾವಣೆ ಮಾಡಬೇಕೆಂದು ಮನಸ್ಸು ಇತ್ತು. ಜಿಲ್ಲಾಪರಿಷತ್ ಅಧ್ಯಕ್ಷರನ್ನೇ ಮಾಡಿಬಿಡೋಣ ಎಂದು ಮನಸ್ಸು ಇತ್ತು.

ಶ್ರೀ ಹೆಚ್ ಏಕಾಂತಯ್ಯ : ಮಾನ್ಯ ಮಂತ್ರಿಗಳು ಇದಕ್ಕೆ ಒಂದು ತಿದ್ದುಪಡಿಯನ್ನು ಕೂಡ ತಂದಿದ್ದರು. ಈಗ ಅದನ್ನು ವಾಪಸ್ ತೆಗೆದುಕೊಂಡಿದ್ದಾರೆ.

ಶ್ರೀ ಎಂ.ವೀರಪ್ಪ ಮೊಯ್ಲಿ : ಹೌದು, ಅದನ್ನು ಅವರು ವಾಪಸ್ ತೆಗೆದುಕೊಂಡಿದ್ದಾರೆ ಯಾಕೆಂದರೆ, That is not in accordance with the amendment . ಅದು ವ್ಯತ್ಯಾಸವಾಗುತ್ತದೆ ಎಂದು ಕೈಬಿಟ್ಟಿದ್ದೇವೆ. ಇಲ್ಲವಾದರೆ Our anxiety was to put the Zilla Parishat Chairman as the District Planning Authority. ನಾವು ಅಫೀಶಿಯಲ್ ಅಮೆಂಡ್‌ಮೆಂಟ್ ಕೂಡ ಕಳುಹಿಸಿದ್ದೇವೆ. Again, we re-examined. ಕಾನ್ಸ್ಟಿಟ್ಯೂಶನಲ್ ಅಮೆಂಡ್‌ಮೆಂಟ್‌ನಲ್ಲಿ ಅದು ಈ ತರಹ ಇರುವುದರಿಂದ ಅದಕ್ಕೆ ವ್ಯತಿರಿಕ್ತವಾಗಬಾರದು ಎಂದು ಮಾಡಿದ್ದೇವೆ. We agree with you. Our spirit is also that.

ಶ್ರೀ ವೈ.ಕೆ.ರಾಮಯ್ಯ : ಎಷ್ಟು ಗಂಭೀರವಾಗಿ ಈ ವಿಷಯಗಳನ್ನು

ತೆಗೆದುಕೊಳ್ಳಬೇಕಾಗಿತ್ತೋ ಅಷ್ಟು ಗಂಭೀರವಾಗಿ ಸಂಬಂಧಪಟ್ಟವರು ತೆಗೆದುಕೊಂಡಿಲ್ಲ ಎಂಬುದು ನನ್ನ ಭಾವನೆ. ಇದೇ ತರಹದ ತಪ್ಪನ್ನು ಈಗಾಗಲೇ ಸದಸ್ಯರ ಗಮನಕ್ಕೆ ನಾನು ತಂದಿದ್ದೇನೆ. ಸೆಕ್ಷನ್ 160ರಲ್ಲಿ 40 ಸಾವಿರ ಎಂದು ಒಂದುಕಡೆಯಲ್ಲಿ ಇದ್ದರೆ, ಇಂಗ್ಲೀಷ್‌ನಲ್ಲಿ 30 ಸಾವಿರ ಎಂದು ಇದೆ. 50 ಸಾವಿರ ಎಂದು ಇದೆ. ಇದರ ಜೊತೆಗೆ ಇನ್ನೊಂದು ತಮಾಷೆ ಇದೆ. ಅದು 11ನೇ ಸೆಕ್ಷನ್‌ನಲ್ಲಿ ಇಂಗ್ಲೀಷ್‌ಗೂ ಕನ್ನಡ ವರ್ಷನ್‌ಗೂ ವ್ಯತ್ಯಾಸವಿದೆ. ಇದನ್ನೆಲ್ಲಾ ಸರಕಾರವನ್ನು ಟೀಕೆ ಮಾಡಲು ನಾನು ಹೇಳುತ್ತಾ ಇಲ್ಲ. ಇದು ನಮ್ಮ ಕರ್ತವ್ಯವೆಂದು ಸರಕಾರದ ಗಮನಕ್ಕೆ ತರುತ್ತಾ ಇದ್ದೇನೆ. ಯಾವುದೇ ಗ್ರಾಮಪಂಚಾಯತಿಯ ಚುನಾವಣಾ ಕ್ಷೇತ್ರದಲ್ಲಿ ಮತದಾರರ ಪಟ್ಟಿಯಲ್ಲಿ ತನ್ನ ಹೆಸರನ್ನು ಪ್ರತಿಯೊಬ್ಬ ವ್ಯಕ್ತಿಯೂ ಈ ಅಧಿನಿಯಮದ ಅಡಿಯಲ್ಲಿ ಅಥವಾ ತಾತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಅನರ್ಹಗೊಂಡಿದ್ದ ಹೊರತು, ಗ್ರಾಮಪಂಚಾಯತಿಯ ಸದಸ್ಯನಾಗಿ ಚುನಾಯಿಸಲು, ಚುನಾಯಿತನಾಗಲು, ಅನರ್ಹನಾಗ ತಕ್ಕದ್ದು.

ಶ್ರೀ ಎಂ. ವೀರಪ್ಪ ಮೊಲಿ : ತಾವುಗಳು ಓದುತ್ತಿರುವ ಬುಕ್ ಏನಿದೆ, ಅದು ಬಹುಶಃ ಹಳೆಯ ಬುಕ್ ಇರಬೇಕು. ಕನ್ನಡದ ಹೊಸ ಪುಸ್ತಕದಲ್ಲಿ ಅದು ಬದಲಾವಣೆಯಾಗಿದೆ. ತಿದ್ದುಪಡಿಯಾಗಿ ಅದು ಸರಿಯಾಗಿದೆ.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಈ ವಿಧೇಯಕದಲ್ಲಿ ತಂದಿರುವಂಥ ವಿಷಯಗಳ ಬಗ್ಗೆ ಪ್ರಸ್ತಾಪನೆ ಮಾಡುವಾಗ, ಗ್ರಾಮಪಂಚಾಯಿತಿ, ಅಥವಾ ಗ್ರಾಮರಾಜ್ಯ, ಈ ಕಲ್ಪನೆ ಹೊಸತಲ್ಲ. ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ ಈ ರಾಷ್ಟ್ರದ ಗ್ರಾಮ ಪ್ರದೇಶಗಳಲ್ಲಿ ಪಂಚಾಯತ್ ವ್ಯವಸ್ಥೆಯ ಕಲ್ಪನೆ ಅಷ್ಟೇ ಇರಲಿಲ್ಲ. ಆ ವ್ಯವಸ್ಥೆ ಕೂಡ ಇತ್ತು. ನಿಮಗೆ ಗೊತ್ತಿದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ, ನಾನು ಹುಟ್ಟಿದ ಊರಿನಲ್ಲಿ ಆ ಒಂದು ವ್ಯವಸ್ಥೆಯು ಇಂದೂ ಕೂಡ ಮುಂದುವರಿಯುತ್ತಾ ಇದೆ. ಅವರದ್ದೇ ಆದಂಥ ದೇವಸ್ಥಾನವನ್ನು ಕಟ್ಟಲಿಕ್ಕೆ, ಅವರ ಊರಿನ ರಸ್ತೆಯನ್ನು ಮಾಡಿಕೊಳ್ಳಲಿಕ್ಕೆ, ಆ ಊರಿನಲ್ಲಿ ನಡೆದಂಥ ಅನ್ಯಾಯಕ್ಕೆ ದಂಡ ಹಾಕಲಿಕ್ಕೆ, ಪರಿಪೂರ್ಣವಾದಂಥ ಗ್ರಾಮಪಂಚಾಯತ್ ವ್ಯವಸ್ಥೆಯು ಸ್ವಾತಂತ್ರ್ಯ ಪೂರ್ವದಲ್ಲಿಯೂ ಇತ್ತು. ಅಷ್ಟೇ ಅಲ್ಲ, ಆ ಒಂದು ವ್ಯವಸ್ಥೆಯು ಕಾರ್ಯಮಾಡುತ್ತಿದ್ದಂಥ ರೀತಿಯನ್ನು ನೋಡಿದಾಗ, ಇತ್ತೀಚಿನ ದಿವಸಗಳಲ್ಲಿ ನಾವು ಕಲ್ಪನೆ ಮಾಡಿಕೊಂಡಂಥ ಗ್ರಾಮ ಸ್ವರಾಜ್ಯ ಏನಿದೆ, ಆವೊತ್ತಿನಿಂದ ಇವೊತ್ತಿನವರೆಗೂ ಅದು ಮುಂದುವರಿದುಕೊಂಡು ಬಂದಿದೆ ಎಂದು ಹೇಳಬಯಸುತ್ತೇನೆ. ಸ್ವಾತಂತ್ರ್ಯ ಪೂರ್ವದಲ್ಲಿದ್ದಂಥ ಗ್ರಾಮಪಂಚಾಯತ್ ವ್ಯವಸ್ಥೆಗೆ, ಸ್ವಾತಂತ್ರ್ಯ ಬಂದ ಮೇಲೆ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, 1956ರಲ್ಲಿ ಗ್ರಾಮ ಸ್ವರಾಜ್ಯಕ್ಕೆ, ಮತ್ತು ಗ್ರಾಮ ಪಂಚಾಯತ್‌ಗಳಿಗೆ, ಕಾನೂನಿನ ಸ್ವರೂಪವನ್ನು ಕೊಟ್ಟು, ಕಾನೂನಿನ ಚೌಕಟ್ಟಿನಲ್ಲಿ ತರುವಂಥ ಪ್ರಯತ್ನ ಬಂತು. ಈ ಪ್ರಯತ್ನದ ಜೊತೆಗೆ ಈ ರಾಷ್ಟ್ರದಲ್ಲಿ ಎರಡು ಭಾರತಗಳನ್ನು ಕಂಡಂಥ ದಾರ್ಶನಿಕರು, ಚಿಂತಕರು, ಆಡಳಿತಗಾರರು ತಮ್ಮದೇ ಆದಂಥ ಗ್ರಾಮಸ್ವರಾಜ್ಯದ, ಪಂಚಾಯತ್‌ರಾಜ್‌ಗಳ ವ್ಯವಸ್ಥೆಯ ಕಲ್ಪನೆ ಮಾಡಲು ಶುರು ಮಾಡಿದರು. ಈ ಒಂದು ಚಿಂತನೆಯನ್ನು ಮಾಡಿದವರಲ್ಲಿ ಪಂಡಿತ್ ಜವಾಹರ್‌ಲಾಲ್ ನೆಹರೂ, ಗಾಂಧೀಜೀಯವರು, ವಿನೋಭಾಜೀಯವರು, ಮತ್ತು ಜಯಪ್ರಕಾಶ್ ನಾರಾಯಣರವರಂಥ ಹಿರಿಯ ಚಿಂತಕರು, ಅವರ ಜೊತೆಗೆ ಇನ್ನೂ ಅನೇಕ ಜನರು,

ಎಸ್.ಕೆಡೇ ಜೈನ್ ಮುಂತಾದವರು ಯಾರೇ ಇರಬಹುದು. ಹೀಗೆ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನಾವು ಎರಡು ಭಾರತಗಳನ್ನು ಸ್ಪಷ್ಟವಾಗಿ ಕಾಣುತ್ತೇವೆ. ಒಂದು ಭಾರತ, ಎಲ್ಲಾಸವಲತ್ತುಗಳ ಸರದಾರರಾಗಿರುವಂಥಾದ್ದು, ಪಟ್ಟಣಗಳು, ನಗರಗಳು. ಮತ್ತೊಂದು ಭಾರತ, ನಮ್ಮ ಗ್ರಾಮಭಾರತ, ಗ್ರಾಮೀಣ ಪ್ರದೇಶದಲ್ಲಿರುವಂಥ ಭಾರತ. ಈ ಗ್ರಾಮೀಣ ಭಾರತದ ಅಭಿವೃದ್ಧಿ ಮತ್ತು ಅದರ ಸರ್ವತೋಮುಖವಾದಂಥ ಪ್ರಗತಿಯನ್ನು ತರುವುದಕ್ಕೆ ನಾನು ಈಗಾಗಲೇ ಹೇಳಿದ ಹಾಗೆ 1956ನೇ ಇಸವಿಯಲ್ಲಿ ಮತ್ತು ಈಚೆಗೆ ಕರ್ನಾಟಕದಲ್ಲಿ ಆ ಒಂದು ವ್ಯವಸ್ಥೆಗೆ ಕಾನೂನಿನ ಸ್ವರೂಪವನ್ನು ಕೊಟ್ಟು ಅದರ ಮುಖಾಂತರ ಈ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯನ್ನು ಸಾಧಿಸುವ ಪ್ರಯತ್ನವನ್ನು ನಾವು ಮಾಡಿದ್ದೇವೆ. ಅವೊತ್ತಿನಿಂದ ಇವೊತ್ತಿನವರೆಗೆ ನಾವೇನು ಗ್ರಾಮಪಂಚಾಯತಿಗಳು ಮತ್ತು ತಾಲ್ಲೂಕು ಅಭಿವೃದ್ಧಿ ಸಮಿತಿಗಳಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೇವೋ, ಇವೆಲ್ಲವಕ್ಕೂ ಕೂಡ ಕಾನೂನಿನ ಚೌಕಟ್ಟು ಇತ್ತೇ ಹೊರತು ಸಂವಿಧಾನದ ಸ್ವರೂಪ ಬಂದಿರಲಿಲ್ಲ. ಈ ದೇಶಕ್ಕೆ ಬಂದಾಗಲೇ, ಫೌಂಡಿಂಗ್ ಫಾದರ್ಸ್ ಆಫ್ ದಿಸ್ ಕಾನ್ಸ್ಟಿಟ್ಯೂಶನ್, ಸಂವಿಧಾನವನ್ನು ಬರೆದಂಥ ರೂಪಿಸಿದಂಥ ಶಿಲ್ಪಿಗಳು ಯಾರಿದ್ದಾರೋ, ಆ ಶಿಲ್ಪಿಗಳು ಸಂವಿಧಾನದಲ್ಲಿ ಪ್ರಮುಖವಾಗಿ ಎರಡು ಅಧ್ಯಾಯಗಳನ್ನು ಜೋಡಿಸಿದ್ದಾರೆ. ಒಂದು ಅಧ್ಯಾಯ ಈ ರಾಷ್ಟ್ರದ ಜನರಿಗೆ ಇರಬೇಕಾದಂಥ ಹಕ್ಕಿನ ಬಗ್ಗೆ. ಪ್ರಜೆಗೆ ಇರಬೇಕಾದಂಥ ಹಕ್ಕಿನ ಬಗ್ಗೆ. ಅದನ್ನು ನಾವು ಮೂಲಭೂತ ಹಕ್ಕುಗಳು ಅಥವಾ ಫಂಡಮೆಂಟಲ್ ರೈಟ್ಸ್ ಎಂದು ಕರೆಯುತ್ತೇವೆ. ಇಷ್ಟೇ ಪ್ರಮುಖವಾದಂಥ, ಇಷ್ಟೇ ಗಂಭೀರವಾದಂಥ ಹಾಗೂ ಇದಕ್ಕಿಂತಲೂ ಪ್ರಮುಖವಾದಂಥ ಇನ್ನೊಂದು ಅಧ್ಯಾಯವೆಂದರೆ, Directive Principles of the State Policy. ಆದರೆ ಈ ದೇಶದಲ್ಲಿ ಆಡಳಿತ ಮಾಡಿದಂಥ ನಮಗೆಲ್ಲರಿಗೂ ಅರಿವು ಇದೆ, ಈ ದೇಶದ ಪ್ರಜೆಗೆ ತನ್ನ ಮೂಲಭೂತ ಹಕ್ಕುಗಳು, ಯಾವುದು ಇವೆ, ಅವುಗಳ ಬಗ್ಗೆ ಇದ್ದಿಂಥ ಆಸಕ್ತಿ, ಬಹುಶಃ ದೇಶವನ್ನು ಆಳುವಂಥ ನಮಗೆ ನಿರ್ದೇಶನ ತತ್ವಗಳಲ್ಲಿ ಏನು ಈ ರಾಷ್ಟ್ರದ ಅಭಿವೃದ್ಧಿಗಾಗಿ ಮಾಡಬೇಕಾದಂಥ ಕೆಲಸವನ್ನು ಮಾಡಬೇಕಾಗಿತ್ತು, ಅದರ ಬಗ್ಗೆ ಆಸಕ್ತಿ ಬರಲಿಲ್ಲ ಎಂದು ನನ್ನ ಭಾವನೆ. ಆರ್ಟಿಕಲ್ 40ರಲ್ಲಿ ಗ್ರಾಮರಾಜ್ಯಗಳನ್ನು ಪಂಚಾಯತ್ ರಾಜ್ಯಗಳನ್ನು ನಿರೂಪಣೆ ಮಾಡಬೇಕೆನ್ನುವಂತಹ ನಿರ್ದೇಶನವನ್ನು ನಮ್ಮ ಸಂವಿಧಾನದ ಶಿಲ್ಪಿಗಳು ಕೊಟ್ಟರೋ ಆದನ್ನು ಕಾರ್ಯರೂಪಕ್ಕೆ ತರಲಿಕ್ಕೆ 1992ನೇ ಇಸವಿಯವರೆಗೂ ನಾವು ಕಾಯಬೇಕಾಗಿ ಬಂತು. ನಮ್ಮ ಮೂಲಭೂತ ಹಕ್ಕುಗಳ ಬಗ್ಗೆ ನಾವು ಸಾಕಷ್ಟು ಚಿಂತನೆಗಳನ್ನು ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಕೂಡ ನಿರ್ದೇಶನ ತತ್ವಗಳನ್ನು ಕಾರ್ಯರೂಪಕ್ಕೆ ತರುವಂತಹ ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ನಿಧಾನವಾಗಿರುವುದು ಅಷ್ಟೆ ಅಲ್ಲ, ನನ್ನ ಪ್ರಕಾರ ವಿಫಲತೆ ಕೂಡ ಆಗಿದೆ. ಆರ್ಟಿಕಲ್ 40- Organisation of Village Panchayats :

"The State shall take steps to organise village Panchayats and endow them with such powers and authority as may be necessary to enable them to function as units of self Government. ಈ ನಿರ್ದೇಶನವನ್ನು ನಮ್ಮ ಸಂವಿಧಾನದ ಶಿಲ್ಪಿಗಳು ಆಡಳಿತಗಾರಿಗೆ ಕೊಟ್ಟಿದ್ದರೊ ಈ ಸಂವಿಧಾನದ ನಿರ್ದೇಶನವನ್ನು ಕಾರ್ಯರೂಪಕ್ಕೆ ತರಬೇಕಾದರೆ ಮಾನ್ಯ ದಿವಂಗತ ರಾಜೀವ್ ಗಾಂಧಿಯವರು ಪ್ರಧಾನಿಯಾಗುವವರೆಗೂ ಸಾಧ್ಯವಾಗಲಿಲ್ಲ. ಅವರು ಸತ್ತ ಮೇಲೆ ಅವರನ್ನು ಹೊಗಳುತ್ತಿದ್ದಾರೆ ಅನ್ನುವುದು ಬೇಡ ಇಷ್ಟು ದಿವಸವಾದಮೇಲಾದರೂ ದಿವಂಗತ ರಾಜೀವ್ ಗಾಂಧಿಯವರು ಈ ಸಂವಿಧಾನದಲ್ಲಿ

ಅಳವಡಿಸಿದಂತಹ "Directive Principles of State Policy" ಯನ್ನು ಅಂದರೆ ಗ್ರಾಮ ರಾಜ್ಯ, ಗ್ರಾಮಸ್ವರಾಜ್ಯ, ಪಂಚಾಯತ್ ವ್ಯವಸ್ಥೆಯನ್ನು ಸಂವಿಧಾನ ಚೌಕಟ್ಟಿನಲ್ಲಿ ತರುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದಿಸುತ್ತೇನೆ. ಆದರೆ ನನ್ನ ಮೂಲ ಉದ್ದೇಶ ಇಷ್ಟೆ. ಯಾವ ಉದ್ದೇಶ ಸಾಧನೆಗಾಗಿ ಗ್ರಾಮ ಸ್ವರಾಜ್ಯಕ್ಕೆ ಸ್ವರಾಜ್ಯ ಪದ್ಧತಿಗೆ ಪಂಚಾಯತ್ ಪದ್ಧತಿಗೆ ಸಂವಿಧಾನದ ಸ್ವರೂಪವನ್ನು ದಿವಂಗತ : ರಾಜೀವ್ ಗಾಂಧಿಯವರು ಕೊಟ್ಟರೋ, ಆ ಉದ್ದೇಶ ಸಾಧನೆಯಾಗಲು ಈ ವಿಧೇಯಕವನ್ನು ತರುವಲ್ಲಿ ಸಫಲವಾಗಿಲ್ಲ. ಯಾವ ಆಸೆಯನ್ನು ಇಟ್ಟುಕೊಂಡು ಅವರು ಗ್ರಾಮಾಂತರ ಪ್ರದೇಶದ ಜನರ ಬದುಕನ್ನು ಹಸನು ಮಾಡಲಿಕ್ಕೆ ಈ ವ್ಯವಸ್ಥೆಯನ್ನು ಸಂವಿಧಾನದ ಚೌಕಟ್ಟಿನಲ್ಲಿ ತರುವಂತಹ ಪ್ರಯತ್ನ ಮಾಡಿದರೂ ಇದು ಸಫಲವಾಗಿಲ್ಲ ಇದನ್ನು ಕಾರ್ಯರೂಪಕ್ಕೆ ತಂದಿಲ್ಲ. ಈ ವಿಧೇಯಕ ಒಂದು ವ್ಯರ್ಥ ಕಸರತ್ತು. It is a futile exercise. ನೀವೇನೂ ಹೊಸದಾಗಿ ಏನನ್ನು ಮಾಡಿಲ್ಲ. ರಾಜಕೀಯ ಲಾಭಕ್ಕಾಗಿ, ನಾವೇನೋ ಒಂದನ್ನು ಹೊಸದಾಗಿ ಮಾಡಿದ್ದೇವೆ ಅಂತ ಹೇಳುವುದಕ್ಕೆ ಈ ವಿಧೇಯಕವನ್ನು ತಂದಿದ್ದೀರಿಯೇ ಹೊರತು ಈ ವಿಧೇಯಕದಲ್ಲಿ ಹೊಸದೇನಿಲ್ಲ. ಏಕೆಂದರೆ ನಮ್ಮ ಸರ್ಕಾರ ಇದ್ದಾಗಲೇ ತಂದಿದ್ದಂಥ ವಿಧೇಯಕ ಇದು, ಆದ್ದರಿಂದ ಈ ದೇಶಕ್ಕೆ ಇದೇನು ಹೊಸದಲ್ಲ. There is nothing new in the Act, this is a futile exercise to derive a political benefit. ಇದರಲ್ಲಿ ಹೊಸತನದು ಯಾವುದು ಇಲ್ಲ. ಯಾವ ಹೊಸ ಯೋಜನೆಗಳು ಇಲ್ಲ. ಹೊಸ ಚಿತನೆಗಳೂ ಇದರೊಳಗೆ ಇಲ್ಲ. ವ್ಯರ್ಥ ಕಸರತ್ತು ಅಂತ ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಸ್ವಾತಂತ್ರ್ಯಪೂರ್ವದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆಯ ಕಲ್ಪನೆ ಅಷ್ಟೇ ಇರಲಿಲ್ಲ, ಅದನ್ನು ಕಾರ್ಯರೂಪಕ್ಕೆ ತರುತ್ತಿರುವುದನ್ನು ನಾನು ಕಣ್ಣಾರೆ ನೋಡಿಲ್ಲ. ಸ್ವಾತಂತ್ರ್ಯ ಬಂದಮೇಲೆ ಗಾಂಧೀಜಿಯವರು ಸರ್ವರಿಗೆ ಸಮಾಪಾಲು ಅಂತ ಹೇಳಿದರು, ಅಷ್ಟು ಸಾಲದಂತೆ ಸರ್ವರಿಗೂ ಸಮಬಾಳು ಅಂದರು. ಆದರೆ ನೀವು ಸೋತ್ತಿರುವುದು ಅಲ್ಲಿಯೇ, ಕೇವಲ ಸರ್ವಸಮ್ಮತವಾದಂಥ ಹಾಲನ್ನು ಕೊಟ್ಟರೆ ಸಾಲುವುದಿಲ್ಲ. ಸಮಬಾಳನ್ನು ಕೊಡಬೇಕೆಂದು ಗಾಂಧೀಜಿಯವರು ಹೇಳಿದ್ದರು. ಅದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಏನು ಸಂವಿಧಾನದ ತಿದ್ದುಪಡಿಯಾಯಿತೋ ಆ ಸಂವಿಧಾನದ ತಿದ್ದುಪಡಿಗೆ ನೀವು ಅಪಚಾರವನ್ನು ಬಗೆದಿದ್ದೀರಿ ಅಂತ ನಾನು ಹೇಳಬೇಕಾಕುತ್ತದೆ. ಏಕೆ ಅಪಚಾರವನ್ನು ಬಗೆದಿದ್ದಾರೆ ಎನ್ನುವುದಕ್ಕೆ ನಾನು ಕಾರಣವನ್ನು ಕೊಡುತ್ತಿದ್ದೇನೆ. ಸಂವಿಧಾನ ತಿದ್ದುಪಡಿಯನ್ನು ತರುವಂಥ ಸಮಯದಲ್ಲಿ ಅದಕ್ಕೆ ಲಗತ್ತಿಸಿರುವಂಥ ಟಿಪ್ಪಣಿ ಒಂದು ಇದೆ. ಆ ಟಿಪ್ಪಣಿಯಲ್ಲಿ ಅವರು ಪಂಚಾಯತ್ ರಾಜ್ ವ್ಯವಸ್ಥೆ ಎಷ್ಟು ಈ ರಾಜ್ಯದಲ್ಲಿ ಸಫಲವಾಗಬೇಕಾಗಿತೋ ಅಷ್ಟು ಸಫಲವಾಗಲಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ಆ ಮಾತನ್ನು ಹೇಳಿ ಅಲ್ಲಿಗೆ ನಿಲ್ಲಿಸಲಿಲ್ಲ, ಈ ವಿಫಲತೆಗೆ ಕಾರಣವನ್ನು ಕಂಡುಹಿಡಿಯುವಂತಹ ಪ್ರಯತ್ನವನ್ನು ಅವರು ಮಾಡಿದ್ದಾರೆ. ನನ್ನ ಪ್ರಕಾರ ಇಲ್ಲ. ಆ ಟಿಪ್ಪಣಿಯ ಪ್ರಕಾರ ಈ ರಾಷ್ಟ್ರದಲ್ಲಿ ಗ್ರಾಮೀಣ ಪ್ರದೇಶಗಳ ಆಡಳಿತ ಅಭಿವೃದ್ಧಿ ವ್ಯವಸ್ಥೆಗಾಗಿ ತಂದಂತಹ ಕಾನೂನುಗಳು ವಿಧೇಯಕಗಳು, ವಿಫಲವಾಗಿದೆ ಅಂತ ಹೇಳುವುದು ಅಷ್ಟೇ ಅಲ್ಲ, ಆ ವಿಫಲತೆಗೆ ಕಾರಣವನ್ನು ನೀಡಿದ್ದಾರೆ. Though the Panchayatiraj Institution has been in existance for a very long time, it has been observed that these institutions have not been able to acquire the status or dignity of a respectable people's bodies due to number of reasons in-

cluding absence of regular election's. ಈ ಟಿಪ್ಪಣಿಯ ಪ್ರಕಾರ ವಿಫಲತೆಗೆ ಈ ರಾಷ್ಟ್ರದ ಗ್ರಾಮೀಣ ಬದುಕನ್ನು ಹಸನೆ ಮಾಡಲಿಕ್ಕೆ ತಂದಂಥ್ ವ್ಯವಸ್ಥೆಯ ವಿಫಲತೆಗೆ ಪ್ರಧಮ ಕಾರಣ ನಿಮ್ಮ ಪ್ರಕಾರ "absence of the regular elections, prolonged suspension and inadequate devolution of the powers". Absence of regular elections. 1980ರ ದಶಕದಲ್ಲಿ ಈ ರಾಜ್ಯದಲ್ಲಿ ಆಡಳಿತವನ್ನು ಮಾಡುತ್ತಿದ್ದಂಥ ಸರ್ಕಾರ, ಕೂಡ ಒಂದು ವಿಧೇಯಕವನ್ನು ತಂದಿತ್ತು, ಒಂದು ವ್ಯವಸ್ಥೆಯನ್ನು ತಂದಿತ್ತು, ಆ ವ್ಯವಸ್ಥೆ ದಿವಂಗತ : ನಜೀರ್ ಸಾಹೇಬ್‌ರವರ ಪರಿಪೂರ್ಣ ಅರ್ಪಣಾ ಮನೋಭಾವನದ ಫಲ. ಈ ವ್ಯವಸ್ಥೆಯ ಕೆಳಗೆ ಜಿಲ್ಲಾಪರಿಷತ್ತು ಮಂಡಲ್ ಪಂಚಾಯತ್ ಮತ್ತು ತಾಲ್ಲೂಕ್ ಸಮಿತಿಗಳನ್ನು ವ್ಯವಸ್ಥೆ ಮಾಡಿ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಪ್ರಯತ್ನವನ್ನು ನಾವು ಮಾಡಿದ್ದೇವೆ. ಆದರೆ 13-1-1991ಕ್ಕೆ ಆರಿಸಿದ ಪ್ರತಿನಿಧಿಗಳ ಅವಧಿ ಮುಗಿಯುತ್ತದೆ. 887 ಜಿಲ್ಲಾಪರಿಷತ್ತಿನ ಸದಸ್ಯರು 56, 372 ಮಂಡಲ್ ಪಂಚಾಯತಿಯ ಸದಸ್ಯರು, 2534 ಮಂಡಲ್ ಪಂಚಾಯತಿಯ ಅಧ್ಯಕ್ಷರು, 194 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದಂತಹ ಸದಸ್ಯರು, 11968 ಪರಿಶಿಷ್ಟ ಜಾತಿಗೆ ಸೇರಿದಂತಹ ಸದಸ್ಯರು, ಅಂದರೆ ಸುಮಾರು 57,259 ಜನಪ್ರತಿನಿಧಿಗಳ ಅಧಿಕಾರವನ್ನು ಮೊಟಕು ಮಾಡಿದಂತಹ ಪಾಪದ ಕೆಲಸವನ್ನು ಈ ಸರ್ಕಾರ ಮಾಡಿದೆ. ಅದನ್ನೇ ಮಾನ್ಯ ದಿವಂಗತ : ರಾಜೀವ್ ಗಾಂಧಿಯವರು ಹೇಳುತ್ತಿರುವುದು that is the reason for the failure of all the systems for the better upliftment of the rural folk in this country. ನಾನು ಈ ವಿಧೇಯಕದ ಮೇಲೆ ಚರ್ಚೆಯು ಪ್ರಾರಂಭವಾದ ದಿವಸದಿಂದ ಕಾಯುತ್ತಾ ಇಲ್ಲಿ ಕುಳಿತ್ತಿದ್ದೇನೆ. ಒಂದೇ ಸಮನಾಗಿ ಮಾನ್ಯ ಮಂತ್ರಿಗಳು ಕಾನೂನಿನ ತೊಡಕಿತ್ತು ಅಂತ ಹೇಳುತ್ತಿದ್ದಾರೆ. 13-1-1991 ರಲ್ಲಿ ಸ್ಥಗಿತ ಗೊಂಡಂಥ ಕಾಲ ಮುಗಿದಂಥ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತಿಗಳಿಗೆ ಚುನಾವಣೆಯನ್ನು ಮಾಡಲಿಕ್ಕೆ ಕಾನೂನಿನ ತೊಡಕಿತ್ತೆಂದು ಏನು ಹೇಳುತ್ತಿದ್ದಾರೆ, ಅದನ್ನು ನಾನು ಒಪ್ಪಲಿಕ್ಕೆ ಸಿದ್ದನಿಲ್ಲ. ಅದಕ್ಕೇ ನಾನು ಹೇಳಿದ್ದು, ಇವರು ಸಂವಿಧಾನ ತಿದ್ದುಪಡಿಗೆ ಅಪಚಾರವನ್ನು ಮಾಡಿದ್ದಾರೆಂದು.ಇದೇ ಟಿಪ್ಪಣಿಯಲ್ಲಿ ಸಂವಿಧಾನದ ತಿದ್ದುಪಡಿಗೆ ತಂದಿರುವ ನಿಮ್ಮದೇ ಟಿಪ್ಪಣಿಯಲ್ಲಿರುವಂತ ವಿಷಯಕ್ಕೆ ಸಂಬಂಧಪಟ್ಟ ಮತ್ತೊಂದು ವಾಕ್ಯವನ್ನು ನಾನು ಓದಲಿಕ್ಕೆ ಇಷ್ಟಪಡುತ್ತೇನೆ. One of the characteristics, one of the important aspects of this amendment is the continuation of the existing laws. Not only existing laws, but Panchayats also, until one year from the commencement of the proposed amendment. ಸನ್ಮಾನ್ಯ ಅಧ್ಯಕ್ಷರೇ, continuation of existing laws ಅಂದರೆ ಈ ಹೊಸ ಸಂವಿಧಾನ ತಿದ್ದುಪಡಿ ಆಧಾರದ ಮೇಲೆ ಬರುವಂಥ ವ್ಯವಸ್ಥೆ ಕಾರ್ಯರೂಪಕ್ಕೆ ಬಂದ ಒಂದು ವರ್ಷದವರೆಗೆ ಅದು ಮುಂದುವರೆಯಬಹುದು I think I am right in my understanding. ಅವರು ತಂದಿರುವ ಸಂವಿಧಾನ ತಿದ್ದುಪಡಿಯನ್ನು ಅನುಸರಿಸಿ ನಾವು ತರುವಂಥ ವಿಧೇಯಕದ ಆಧಾರದ ಮೇಲೆ, ನಾವು ತರುವಂಥ ಆಡಳಿತ ವ್ಯವಸ್ಥೆ ಅಥವಾ ಗ್ರಾಮಪಂಚಾಯ್ತಿ ವ್ಯವಸ್ಥೆ ಬಂದ ಒಂದು ವರ್ಷದವರೆಗೆ ಕೂಡ ಹಳೆಯ ಕಾನೂನು ಆಧಾರದ ಮೇಲೆ ಇರುವಂಥ ವ್ಯವಸ್ಥೆ ಮುಂದುವರಿಯಲಿಕ್ಕೆ ಅವಕಾಶ ಇದೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಈಗತಾನೆ ಗುರುತು ಹಾಕಿಕೊಂಡೆ, ಅಂದರೆ 2 ವರ್ಷ 4

ತಿಂಗಳಾಯಿತು. ಈಗ ಇದು ಪರಿಪೂರ್ಣವಾಗಬೇಕಾದರೆ ಬಹುಶಃ ಇನ್ನು ಒಂದು ವರ್ಷ ತೆಗೆದುಕೊಳ್ಳುತ್ತದೋ, 6 ತಿಂಗಳು ತೆಗೆದುಕೊಳ್ಳುತ್ತದೋ, ಗೊತ್ತಿಲ್ಲ. ಅದುದರಿಂದ ನನ್ನ ಲೆಕ್ಕದ ಪ್ರಕಾರ ಸುಮಾರು 3 ವರ್ಷಗಳ ಕಾಲ ಈ ರಾಜ್ಯದ 57 ಸಾವಿರ ಜನಪ್ರತಿನಿಧಿಗಳ ಅಧಿಕಾರವನ್ನು ಕಿತ್ತುಕೊಂಡಂಥ ಪಾಪದ ಕೆಲಸವನ್ನು ಈ ಸರ್ಕಾರ ಮಾಡಿದೆ. And there was no legal bar to hold elections. ನಾನು ವಿಧಿ ಇಲ್ಲದೆ ಹೇಳಬೇಕಾಗುತ್ತದೆ. ಬಹುಶಃ ಈ ಸರ್ಕಾರಕ್ಕೆ ಚುನಾವಣೆ ಎದುರಿಸಲಿಕ್ಕೆ ಶಕ್ತಿ ಇರಲಿಲ್ಲವೋ, ಅಥವಾ ಆಸಕ್ತಿ ಇರಲ್ಲಿವೋ ಅದು ನನಗೆ ಗೊತ್ತಿಲ್ಲ, ಅದು ಅವರಿಗೇ ಬಿಟ್ಟಿದ್ದು. ಆದರೆ ನಾನು ಮಾತ್ರ ಇಷ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ, ಈ 57 ಸಾವಿರ ಜನರಿಗೆ ಅಧಿಕಾರವನ್ನು ಕೊಡುವಂಥ ಕೆಲಸವನ್ನು ಮಾಡಲಿಕ್ಕೆ ಕಾನೂನು ತೊಡಕು ಇರಲಿಲ್ಲ. ಬಹುಶ : ಇಚ್ಛಾಶಕ್ತಿ ಇರಲಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಅದಕ್ಕಾಗಿ ನಾನು ಹೇಳಿದ್ದು, ಈ ಸಂವಿಧಾನದಲ್ಲಿ ಕೊಟ್ಟಿರುವಂದ ಟಿಪ್ಪಣಿಯಲ್ಲಿ ಹಿಂದೆ ನಮ್ಮ ಗ್ರಾಮ ಸ್ವರಾಜ್ಯ ವಿಫಲವಾಗಲಿಕ್ಕೆ ಪ್ರಧಮವಾದಂಥ ಕಾರಣ ಯಾವುದೆಂದರೆ ಕಾಲಕಾಲಕ್ಕೆ ಚುನಾವಣೆ ನಡೆಯದೇ ಇದ್ದುದು. ಯಾವುದನ್ನು ಮಾಡಿ ಎಂದು ರಾಜೀವ್ ಗಾಂಧಿ ಆವರು ಹೇಳಿದರು ಅದನ್ನು ನೀವು ಮಾಡಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ ಚುನಾವಣೆ ಮುಂದುವರಿಸಿಕೊಂಡು ಬಂದು ಅವರು ಸತ್ತು ಸ್ವರ್ಗದಲ್ಲಿರುವಂಥ ಆತ್ಮಕ್ಕೆ ಅಪಚಾರ ಮಾಡಿದ್ದೀರೆಂದು ನಾನು ವಿಧಿಯಿಲ್ಲದೆ ಹೆಳಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಇದೇ ಸಂವಿಧಾನದಲ್ಲಿ.....

* ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಕಾಲಕಾಲಕ್ಕೆ ಚುನಾವಣೆಗಳನ್ನು ಮಾಡಬೇಕು, ಅದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಆದರೆ ಈ ಸರ್ಕಾರದವತಿಯಿಂದ ಹಾಗೂ ನೇರವಾಗಿ ಈ ಪ್ರಶ್ನೆಗೆ ಉತ್ತರ ಕೊಡಬೇಕಾದರೆ ನಾವು ಏನಾದರು ಈ ಸಂದರ್ಭದಲ್ಲಿ 1971ನೇ ಸೆನ್ಸಸ್ ಪ್ರಕಾರ ಮಾಡಿಸಿರತಕ್ಕಂಥ ಡೀಲಿಮಿಟೆಷನ್ ಆಧಾರದ ಮೇಲೆ ಚುನಾವಣೆಗಳು ಮಾಡಲಿಕ್ಕೆ ಹೋಗಿದ್ದಿದ್ದರೆ, ಅವರೇ ಹೇಳಿದ ಪ್ರಕಾರ ಒಂದೇ ವರ್ಷದಲ್ಲಿ ಪುನ : ಚುನಾವಣೆಗಳನ್ನು ಮಾಡಬೇಕಾಗುತ್ತಿತ್ತು. ಮತ್ತೆ ತಾಲ್ಲೂಕು ಮಟ್ಟದಲ್ಲಿ ಡೀಲಿಮಿಟೇಷನ್ ಇಲ್ಲದೆ ಇರುವ ಕಾರಣ ಅಲ್ಲಿ ಡೀಲಿಮಿಟೇಷನ್ ಮಾಡಿ ಬೇರೆ ಪ್ರತ್ಯೇಕವಾಗಿ ಅಲ್ಲಿ ಚುನಾವಣೆ ಮಾಡಬೇಕಾಗಿತ್ತು. ಈ ರೀತಿ ಮಾಡಿದ್ದರೆ ಆಗ ನಮ್ಮ ಪ್ರಯತ್ನ ವ್ಯರ್ಥವಾಗುತ್ತದೆ. ಏಕೆಂದರೆ ಒಂದು ವರ್ಷದಲ್ಲಿ 3 ಚುನಾವಣೆಗಳನ್ನು ಮಾಡಬೇಕಾಗಿತ್ತು ಮುಂದೆ ಬರುವ ವರ್ಷದಲ್ಲಿ ಅಸೆಂಬ್ಲಿ ಚುನಾವಣೆಯನ್ನು ಬಿಟ್ಟು ಒಂದೇ ವರ್ಷದಲ್ಲಿ 3 ಚುನಾವಣೆಗಳು ಅಂದರೆ ಈಗಿರುವ ಡೀಲಿಮಿಟೇಷನ್ ಪ್ರಕಾರ ಉದಾಹರೆಣೆಗೆ ಒಂದು ಚುನಾವಣೆ ಮಾಡಿದ್ದರೆ, ಮಾಡಬೇಕೆಂದು ನಾನು ;ಹೇಳುತ್ತಿಲ್ಲ, ಒಂದೇ ವರ್ಷದಲ್ಲಿ ಪುನಃ 1991 ನೇ ಸೆನ್ಸಸ್ ಪ್ರಕಾರ ಅದೇ ಜಿಲ್ಲಾ ಮಟ್ಟದಲ್ಲಿ ಮಂಡಲ ಮಟ್ಟದಲ್ಲಿ ಪುನಃ ಚುನಾವಣೆ ಮಾಡಬೇಕಾಗುತ್ತಿತ್ತು. ಅದು ಎರಡನೇ ಚುನಾವಣೆ. ಮೂರನೆಯದು ತಾಲ್ಲೂಕು ಮಟ್ಟದಲ್ಲಿ ಡೀಲಿಮಿಟೇಷನ್ ಮಾಡಿ ಮತ್ತೆ ಪ್ರತ್ಯೇಕವಾಗಿ ಚುನಾವಣೆಗಳನ್ನು ಮಾಡಬೇಕಾಗಿತ್ತು. ಹೀಗೆ ಒಂದು ವರ್ಷದಲ್ಲಿ ಅದೇ ಒಂದು ಉದ್ದೇಶಕ್ಕಾಗಿ 3 ಚುನಾವಣೆಗಳನ್ನು ಮಾಡಿದ್ದರೆ ಆ ನಮ್ಮ ಪ್ರಯತ್ನ ವ್ಯರ್ಥವಾಗುತ್ತಿತ್ತು. ಅಷ್ಟೇ ಅಲ್ಲ, ಕರ್ನಾಟಕದ ಜನತೆಗೆ ಅಪಾರವಾದಂಥ ಹಿಂಸೆ ಕೊಟ್ಟಂತೆ ಆಗುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯವೆಂದು ನಾನು ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ವೈ.ಕೆ.ರಾಮಯ್ಯ : ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳತಕ್ಕಂಥ ಮಾತುಗಳನ್ನು ನಾನು ಒಪ್ಪಲಿಕ್ಕೆ ಸಿದ್ದನಿಲ್ಲ. for the following reasons ಒಂದನೇಯದು ಚುನಾವಣೆಗಳನ್ನು nearest available ಜನಗಣತಿ ಮೇಲೆ ಮೂಡಬೇಕು ಎಂಬ ಕಾನೂನು ಇದೆ. Right message should go to the people from this House. I fully agree with you. ನಾವು ಇಲ್ಲಿ ಮಾತನಾಡುವಾಗ ಇಲ್ಲಿ ಇರತಕ್ಕ ನನ್ನ ಸ್ನೇಹಿತರು ಇಷ್ಟು ಜನ ಮಾತ್ರ ಇದ್ದರೆ ಎಂದು ಭಾವಿಸಿಕೊಳ್ಳುವುದಿಲ್ಲ, ನನ್ನ ನಡತೆಯನ್ನು ನನ್ನ ಮಾತನ್ನು ಲಕ್ಷಾಂತರ ಜನ ಹೊರಗಡೆ ನೋಡುತ್ತಿದ್ದಾರೆ ಎನ್ನತಕ್ಕ ಸಂಪೂರ್ಣ ಪ್ರಜ್ಞೆಯನ್ನು ಇಟ್ಟುಕೊಂಡು ನಾನು ಮಾತನಾಡುತ್ತಿದ್ದೇನೆ. 13.1.91ರಲ್ಲಿ ಹಿಂದೆ ಇದ್ದಂಥ ಕಾನೂನಿನ ವ್ಯವಸ್ಥೆಯ ಮೇಲೆ ಚುನಾವಣೆ ಮಾಡಬೇಕಾಗಿತ್ತು. ಅದರ ಕಾಲಾವಧಿ ಮುಗಿದುಹೊಗಿ ಈಗಾಗಲೇ 2 ವರ್ಷವಾಯಿತು. ಅಂದರೆ ನೀವು ಆಗ ಚುನಾವಣೆ ಮಾಡಿದ್ದರೆ ಆಗ ಅದನ್ನು ಕೊಶ್ಚನ್ ಮಾಡಲು ಅಡ್ಡಿ ಇರಲಿಲ್ಲ. ಸೆನ್‌ಸಸ್ ಯಾವುದು ಲಭ್ಯ ಇದೆ ಆ ಲಭ್ಯ ಇರತಕ್ಕ ಸೆನ್‌ಸಸ್ ಅಧಾರದ ಮೇಲೆ ಚುನಾವಣೆ ಮಾಡಬೇಕು ಎನ್ನತಕ್ಕ ಕಾನೂನು ಇದೆ. ಅದನ್ನು ಒಪ್ಪಿಕೊಳ್ಳುತ್ತೇನೆ. 13.1.1991 ರಲ್ಲಿ ಯಾವ ಸೆನ್‌ಸಸ್ ಇತ್ತು ಯಾವ ಜನಸಂಖ್ಯೆ ಆಧಾರ ಇತ್ತೊ, ಅದನ್ನು ಆಧಾರ ಇಟ್ಟುಕೊಂಡು ಚುನಾವಣೆ ಮಾಡಲಿಕ್ಕೆ ಅಡ್ಡಿ ಇರಲಿಲ್ಲ. ಚುನಾವಣೆ ಮಾಡಿದರೆ ಒಂದು ವರ್ಷದಲ್ಲಿ ಮೂರು ಚುನಾವಣೆ ಮಾಡಬೇಕಾಗುತ್ತದೆ ಎನ್ನತಕ್ಕವಾದ ಏನು ಇದೆ ಇದನ್ನು ಒಪ್ಪಲಿಕ್ಕೆ ಸಾದ್ಯವಿಲ್ಲ, ತಾವು ಚುನಾವಣೆ ಮಾಡಿದರೆ ಗ್ರಾಮೀಣ ಜನತೆ ಅಧಿಕಾರ ಮಾಡುವಂಥ ಅಥವಾ ಕರ್ತವ್ಯ ನಿರ್ವಹಣೆ ಮಾಡುವಂಥ ಒಂದು ಅವಕಾಶ ಸಿಗುತ್ತಿತ್ತು. With all conscious, at my command, I am arguing that this Government has failed to conduct the elections for political reasons.

ಶ್ರೀ ಡಿ. ಆರ್.ಪಾಟೀಲ್ : ತಾವು 91 ಎಂದು ಹೇಳಿದ್ದೀರಿ, ಆದರೆ ಅದು 92ರಲ್ಲಿ ಅದರೆ ಒಂದುವರೆ ವರ್ಷ ಸಹ ಆಗಲಿಲ್ಲ.

ಶ್ರೀ ವೈ.ಕೆ. ರಾಮಯ್ಯ : ನಾನು 91 ಎಂದು ತಿಳಿದುಕೊಂಡಿದ್ದೆ ಅದು sub-ject to correction. Am I right ? ಇನ್ನು ಮುಂದಿನ ವಿಷಯಕ್ಕೆ ಹೊಗಲು ನಾನು ಇಷ್ಟಪಡುತ್ತೇನೆ. ಗ್ರಾಮೀಣ ಜನತೆಯ ಬದುಕನ್ನು ಹಸನಾಗಿ ಮಾಡಲು ಈ ತಿದ್ದುಪಡಿಯನ್ನು ತರಲಾಗಿದೆ ಎಂಬ ಮಾತನ್ನು ಹೇಳಿದ್ದೀರಿ. ಗ್ರಾಮೀಣ ಜನತೆಯೇ ಅಧಿಕಾರವನ್ನು ಹಂಚಿಕೊಳ್ಳತಕ್ಕ ಈ ಸಂಧರ್ಭದಲ್ಲಿ ಆ ಪ್ರದೇಶದಲ್ಲಿ ಇರತಕ್ಕ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಹಾಗೂ ಹಿಂದುಳಿದವರಿಗೆ ಸಾಕಷ್ಟು ಅವಕಾಶ ಸಿಗದೆ ಇದ್ದದ್ದು ಒಂದು ಕಾರಣ ಎಂಬುದನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ಎಲ್ಲವನ್ನು ವಿರೊಧಮಾಡಲಾಗುವುದಿಲ್ಲ. ನಾವು ತಂದಂಥ ವ್ಯವಸ್ಥೆಯಲ್ಲಿ ಹಿಂದುಳಿದ ವರ್ಗದವರಿಗೆ ಮಿಾಸಲಾತಿ ಇರಲಿಲ್ಲ. ನೀವು ಈಗ ಮಿಾಸಲಾತಿಯನ್ನು ತಂದಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದರ ಗೊಂದಲ ಬೇರೆ ಇದೆ, ಅದಕ್ಕೆ ಆಮೇಲೆ ಬರುತ್ತೇನೆ. ಈ ವಿಧೇಯಕವನ್ನು ತಂದಿರತಕ್ಕಂಥ ಮಂತ್ರಿಗಳು ರಾಜಮನೆತನದವರು, ಅದುದರಿಂದ ಅವರಿಗೆ ಗ್ರಾಮೀಣ ಪ್ರದೇಶದ ಜನತೆಯ ಅಭಿವೃದ್ಧಿಗಾಗಿ ತರುವಂಥ ಕಾನೂನಾಗಲೀ ವಿಧೇಯಕವಾಗಲೀ ಅದರಲ್ಲಿ ಏನಾದರೂ ರಿಸರ್ವೆಷನ್ಸ್ ಇವೊತ್ತು ಇದೆ. ಎಂದು ನಾನು

ಭಾವಿಸಿಕೊಳ್ಳುವುದಿಲ್ಲ. ಸಂಪತ್ತಿನ ಮಧ್ಯದಲ್ಲಿ ಬೆಳೆದಂಥ ಅನೇಕ ಜನರು ಬಡವರ ಮಧ್ಯದಲ್ಲಿ ಗುಡಿಸಲಿನಲ್ಲಿ ಸ್ಲಮ್‌ಗಳಲ್ಲಿ ಒಂದು ಕೆಲಸ ಮಾಡಿದಂಥ ನಿದರ್ಶನಗಳನ್ನು ನಾನು ನೋಡಿದ್ದೇನೆ. ಆದರೆ ಒಂದು ಮಾತ್ತು ನಿಜ. ನಾವು ಬೆಳೆದಂಥ ಪರಿಸರ ಬದುಕಿನಲ್ಲಿ ನಾವು ಅನುಭವಿಸಿದ್ದ ಅನುಭವ ಬಹುಶಃ ನೀವು ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ. ಸಾರ್ವಜನಿಕ ಜೀವನದಲ್ಲಿ ಅಷ್ಟೇ ಅಲ್ಲ, ನಮ್ಮ ಸ್ವಂತ ಜೀವನದಲ್ಲಿ ನಮ್ಮ ಕಾರ್ಯವೈಖರಿಯ ಮೇಲೆ ಅದು ಹೆಚ್ಚಿನ ಪ್ರಭಾವವನ್ನು ಬೀರುತ್ತದೆ ಎಂದು ನಂಬಿಕೊಂಡಿರುವವನು ನಾನು. ಇದು ಸಾರ್ವಜನಿಕ ಜೀವನ. ಆದರೆ ಸನ್ಮಾನ್ಯ ಮಂತ್ರಿಗಳು ಇದಕ್ಕೆ ಒಂದು ಎಕ್ಸ್‌ಪ್ಶನಲ್ ಎಂದು ನಾನು ಭಾವಿಸಿ ಕೊಂಡಿದ್ದೇನೆ. ನಮ್ಮ ಹಿರಿಯರಾದ ಚಂದ್ರೇಗೌಡರು ಹೇಳಿದರು ಕೇಂದ್ರೀಕೃತ ಅಧಿಕಾರವನ್ನು ತೆಗೆದು --- ವಿಕೇಂದ್ರೀಕರಣ ಅಧಿಕಾರವನ್ನು ತರುವಂಥ ಮಸೂದೆಯನ್ನು ತರುವಂಥ, ರುವಾರಿ ಆಗಿದ್ದಾರೆ ಎಂದು ಹೇಳಿದರು. ಅದನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ಗ್ರಾಮಾಂತರ ಜನರಿಗೆ ಅವರದೇ ಆದಂತಹ ಚಂತನೆ ಇದೆ. ಅವರದೇ ಆದ ಬದುಕು ಇದೆ. ಅವರದೇ ಆದಂಥ ನೋವು ಇದೆ. ಅವರದೇ ಆದಂಥಹ ನಿಲುವೂ ಕೂಡ ಇದೆ. ಈ ಬದುಕುವ ನೋವು ನಲಿವನ್ನು ಅನುಭವಿಸುವುದರಲ್ಲೂ ಇವರಿಗೆ ಅವಕಾಶ ಸಿಗಲಿಲ್ಲವಲ್ಲಾ ಎಂಬುದಷ್ಟೆ ತಕರಾರು. ನಾವು ಅದೃಷ್ಟವಂತರು. ನನಗೆ ಹಸಿದ ಹೊಟ್ಟೆ ಗೊತ್ತು. ಅಪಾರವಾದ ಅನ್ನದ ರಾಶಿ ಬಿದ್ದಿರುವುದೂ ನನಗೆ ಗೊತ್ತು. ಅವೆರಡನ್ನೂ ನಾನು ನೋಡಿದ್ದೇನೆ. ಆದರೆ ಗ್ರಾಮೀಣ ಬದುಕನ್ನು ಸಂಪೂರ್ಣವಾಗಿ ತಾವೇ ಅನುಭವಿಸುವಂಥ ಒಂದು ಸಂದರ್ಭ ತಮಗೆ ಸಿಗಲಿಲ್ಲವೇನೋ ಎಂದು ನನಗೆ ವ್ಯಥೆ ನಿನ್ನೆ ದಿವಸ ತಾವು ಒಂದು ಮಾತನ್ನು ಹೇಳಿದ್ದಿರಿ, ಏನೆಂದರೆ. 'My commitment for the decentralisation is total and complete.ಎಂದು ಆದರೆ, ಆ ಹಿರಿಯರಿಗೆ ತಮ್ಮ ಮುಖಾಂತರ ಒಂದು ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಬ್ಬ ವ್ಯಕ್ತಿಗೆ ತನ್ನೆಲ್ಲ ಅಭಿಲಾಷೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗುವುದಿಲ್ಲ.I am not questioning your commitment. I am just complaining that you are unable to bring all your commitments to the practical field.ಇದು ನನ್ನ ತಕರಾರು. ನಿಮ್ಮ ಅಭಿಲಾಷೆಯ ಬಗ್ಗೆ, ನಿಮ್ಮ ಕಮಿಟ್‌ಮೆಂಟ್‌ನ ಬಗ್ಗೆ, ನಿಮ್ಮ ಆಸಕ್ತಿಯ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ನಿಮ್ಮೆಲ್ಲ ಅಭಿಲಾಷೆಗಳನ್ನು ಕಾರ್ಯರೂಪಕ್ಕೆ ತರುವಂಥ ಅವಕಾಶ ನಿಮಗೆ ಸಿಗುತ್ತಿಲ್ಲ. ಅದಕ್ಕೆ ಕಾರಣ ನೀವೊಬ್ಬರು ವ್ಯಕ್ತಿಯಲ್ಲ. ಅದಕ್ಕೆ ಕಾರಣ ಇಡೀ ವ್ಯವಸ್ಥೆ. ಅದಕ್ಕೆ ನಾನು ಮೊದಲೇ ಪ್ರಸ್ತಾಪ ಮಾಡಿದ್ದೆ. ಈ ಒಂದು ವಿಧೇಯಕ ಏನಿದೆ ಇದನ್ನು ಇವತ್ತು ನೀವು ತಂದಿರುವುದು ಹೊಸದಲ್ಲ.It is a futile exercise.ವ್ಯರ್ಥಸಾಧನೆ. ಕಾರಣವಿಷ್ಟೆ. ಜನತಾ ಪಕ್ಷದವರಾದ ನಾವು ಅಧಿಕಾರಕೆ ಬಂದಾಗ ಒಂದು ವ್ಯವಸ್ಥೆಯನ್ನು ತಂದೆವು. ಅದರಮೇಲೆ ಚುನಾವಣೆ ಮಾಡಿಬಿಟ್ಟರು, ನಾವು ಹೊಸದಾಗಿ ಏನೂ ಮಾಡಲಿಲ್ಲವಲ್ಲ ಎಂದು ಹೇಳಿಕೊಳ್ಳುವುದಕ್ಕೆ ಏನೋ ಒಂದು ಹೊಸ ದೊಡ್ಡ ಸಾಧನೆ. ನಮ್ಮ ಶ್ರೀಮಾನ್ ಚಂದ್ರೇಗೌಡರು ಹೇಳಿದಹಾಗೆ ಒಂದು ಹೊಸ ಪ್ರಯೋಗವನ್ನೇ ಮಾಡಿಬಿಟ್ಟಿದ್ದೇವೆ ಎಂದು ಹೇಳಿ ನಮ್ಮನ್ನು ಭ್ರಮಾಲೋಕಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಈ ಒಂದು ವ್ಯರ್ಥಸಾಧನೆಯನ್ನು ನೀವು ಮಾಡುತ್ತಿದ್ದೀರಿ. ಸನ್ಮಾನ್ಯ ಮಂತ್ರಿಗಳ ಹೇಳಿಕೆ ಏನಿದೆ, My commitment is total and complete. ಎನ್ನುವುದನ್ನು ನಾನು ಒಪ್ಪಲಿಕ್ಕೆ ಸಿದ್ಧನಿಲ್ಲ. ಅದಕ್ಕೆ ಕಾರಣ ಏನು ಎಂದರೆ, 1980ರ ದಶಕದಲ್ಲಿ ಈ

ರಾಜ್ಯದಲ್ಲಿ ಕಾರ್ಯರೂಪಕ್ಕೆ ತಂದಂಥ ಗ್ರಾಮಿಣ ಭಾರತದ ಆಡಳಿತ ವ್ಯವಸ್ಥೆಗೂ ಇದಕ್ಕೂ ಇರುವಂಥ ವ್ಯತ್ಯಾಸ ಮೂಲಭೂತವಾಗಿ ಏನು ಎಂದರೆ ನಾನು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಓದಿದೆ. ಎಲ್ಲವನ್ನೂ ಹೇಳುವುದಕ್ಕೆ ನಾನು ಸಿದ್ದನಿಲ್ಲ. ನಾನು ಆಗಲೇ ಹೇಳಿದ್ದೇನೆ. ದಿವಂಗತ ನಜೀರ್ ಸಾಹೇಬರ ನೂರಕ್ಕೆ ನೂರು ಅರ್ಷಣಾ ಮನೋಭಾವದ ಫಲವಾಗಿ ಆ ಒಂದು ಕಾನೂನು ಕಾರ್ಯರೂಪಕ್ಕೆ ಬಂತು. ಆ ಕಾನೂನಿನ ಚರ್ಚೆಯಿಂದ ಹಿಡಿದು ಅದು ಕಾರ್ಯರೂಪಕ್ಕೆ ಬರುವವರೆಗು ಅದರ ಜೊತೆಯಲ್ಲಿದ್ದಂಥ ಅವಕಾಶ ನಮಗೆ ಒದಗಿತ್ತು. ಅಲ್ಲಿ, ಚುನಾಯಿತ ಪ್ರತಿನಿಧಿ ಸಂಪೂರ್ಣ ಅಧಿಕಾರವನ್ನು ಚಲಾಯಿಸುವಂಥ ಅವಕಾಶವನ್ನು ನಾವು ಕೊಟ್ಟಿದ್ದೆವು. The people representative was an executive head . ಆತ ಕಾರ್ಯನಿರ್ವಾಹಕ ಮುಖ್ಯಸ್ಥ ಆಗಿದ್ದ. ನಾನು ಇವತ್ತು ವಿಧಿ ಇಲ್ಲದೆ ಹೇಳಬೇಕಾಗುತ್ತದೆ. ಯಾವ ಜನಪ್ರತಿನಿಧಿಗಳಿಗೆ ನಾವು ಪರಿಪೂರ್ಣವಾದಂಥ ಸ್ವಾತಂತ್ರ್ಯವನ್ನು ಆಡಳಿತಾತ್ಮಕವಾದಂಥ ಅಧಿಕಾರವನ್ನು ಕೊಟ್ಟಿದ್ದೆವೋ ಈ ನಿಮ್ಮ ಸಂವಿಧಾನದಿಂದ ಆ ಆಡಳಿತವನ್ನು ನೀವು ಕಿತ್ತುಹಾಕಿದ್ದಿರಿ ಹಾಗೂ ಕಿತ್ತುಕೊಂಡಿದ್ದೀರಿ. ಸನ್ಮಾನ್ಯ ಅಧ್ಯಕ್ಷರೇ, What is the strength of the political power or what is the source of the political power ? I think you will not disagree if I say that it is only the people who is the source of all our power and strength. ಇದನ್ನು ಒಪ್ಪಿಕೊಳ್ಳುವುದಾದರೆ ಯಾರಿಂದ ನಿಮಗೆ ಅಧಿಕಾರ ಬಂದಿದೆಯೋ, ಯಾರಿಂದ ಅಧಿಕಾರವನ್ನು ಪಡೆದುಕೊಂಡಿದ್ದೀರೋ ಆ ಜನಗಳಿಗೆ ಅಧಿಕಾರವನ್ನು ಕೊಡುವುದರ ಬಗ್ಗೆ ನಿಮಗೆ ಚೌಕಾಸಿ ಏಕೆ? ಹೇಳಿ ಸ್ವಾಮಿ, ಯಾರಿಂದ ನಮಗೆ ಅಧಿಕಾರ ಬಂದಿದೆಯೋ, ಆ 57 ಸಾವಿರ ಜನಗಳ ಅಧಿಕಾರವನ್ನು ಮೊಟಕು ಮಾಡಿದ್ದು ಅಲ್ಲದೇನೆ, ಮುಂದೆ ಈ ವಿಧೇಯಕದಲ್ಲಿ ಆ ಅಧಿಕಾರವನ್ನು ಕಿತ್ತುಕೊಳ್ಳುವಂಥ ಪ್ರಯತ್ನವನ್ನು ನೀವು ಏತ್ತಕ್ಕೆ ಮಾಡುತ್ತೀರಾ? ನಿನ್ನೆ ನನ್ನ ಮಿತ್ರರಾದಂಥ ಪಾಟೀಲರು ಹೇಳುತ್ತಿದ್ದರು, ಯಾವುದೋ ಒಂದು ಸೆಕ್ಷನ್ ಓದಿ ಹೇಳುತ್ತಿದ್ದರು. ಅಂದರೆ ಈ ಎಲ್ಲ ಕಲಂಗಳನ್ನು ಅಂಕಿ ಅಂಶಗಳನ್ನು ಓದಲಿಕ್ಕೆ ನನಗೆ ಇಷ್ಟವಿಲ್ಲ.

11.20 ಎ.ಎಂ

ಜನತಾ ಪಕ್ಷದ ಸರ್ಕಾರ ತಂದಂತಹ ಏನು ಒಂದು ಕಾಯಿದೆ ವ್ಯವಸ್ಥೆ ಇತ್ತೋ ಅದಕ್ಕಿಂತಲೂ ಹೆಚ್ಚಿನ ಅಧಿಕಾರವನ್ನು ಈ ವಿಧೇಯಕದಲ್ಲಿ ಕೊಟ್ಟಿರುವುದಕ್ಕಾಗಿ ಆ ಜನಗಳ ಪರವಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಆದರೆ ಆದೇ ಔದಾರ್ಯ ಜಿಲ್ಲಾ ಪರಿಷತ್ತು ಮತ್ತು ತಾಲ್ಲೂಕು ಅಭಿವೃದ್ಧಿ ಸಮಿತಿಗಳಿಗೆ ಏಕೆ ತೋರಲಿಲ್ಲ ? ನಾನು ಅದನ್ನು ಓದಲಿಕ್ಕೆ ಸಿದ್ದನಿಲ್ಲ. ನಾನು ಆ ಸೆಕ್ಷನ್‌ಗಳನ್ನು ಮಾತ್ರ ಹೇಳುತ್ತೇನೆ. ಓದುವುದಕ್ಕೆ ಕಾಲಾವಕಾಶ ಇಲ್ಲದೇ ಇರುವುದರಿಂದ. ನನ್ನ ವಾದ ಇಷ್ಟೇನೆ. ಮಂಡಲ್ ಪಂಚಾಯತಿಯಲ್ಲಿ ಜನ ಪ್ರತಿನಿಧಿಗಳಿಗೆ ಕೊಟ್ಟಿರುವಷ್ಟು ಅಧಿಕಾರವನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ, ಜಿಲ್ಲಾ ಪಂಚಾಯತಿಗಳಿಗೆ ನೀವು ಕೊಟ್ಟಿಲ್ಲ. ಜನ ಪ್ರತಿನಿಧಿಗಳ ಅಧಿಕಾರವನ್ನು ನೀವು ಮೊಟಕು ಮಾಡಿದ್ದೀರಿ.

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ರಾಮಯ್ಯನವರೇ, ಅದು ಸರಿಯಿಲ್ಲ ಎಂದು ನಾನು ಈಗಲೇ ಹೇಳುತ್ತೇನೆ. ಅದೇ ಸೂಪರ್‌ವಿಷನ್ ಅಂಡ್ ಕಂಟ್ರೋಲ್ ಅಧಿಕಾರ ಪಂಚಾಯತಿ ಮಟ್ಟದಲ್ಲಿ ನಾವೇನು ಕೊಟ್ಟಿದ್ದೇವೆ, ಅದೇ ಸೂಪರ್‌ವಿಷನ್ ಆಂಡ್ ಕಂಟ್ರೋಲ್ ಅಧಿಕಾರ ತಾಲ್ಲೂಕು ಮಟ್ಟದಲ್ಲಿ ಕೂಡ ಇದೆ, ಜಿಲ್ಲಾ ಮಟ್ಟದಲ್ಲಿ ಕೂಡ ಇದೆ. ಅಂದರೆ ಅಫಿಷಿಯಲ್ ಮೇಲೆ ಸೂಪರ್‌ವಿಷನ್ ಆಂಡ್ ಕಂಟ್ರೋಲ್ ಏನಿದೆ ಅದನ್ನೆತಾನೇ ನೀವು ಪ್ರಸ್ತಾಪ ಮಾಡುತ್ತಾ ಇರುವುದು. ಈ ಒಂದು ತಮ್ಮ ವಿಚಾರ ಏನು ಇದೆ, ನಾವು ಹಳ್ಳಿಮಟ್ಟದಲ್ಲಿ ಅಧಿಕಾರ ಕೊಟ್ಟಿಲ್ಲ, ತಾಲ್ಲೂಕು ಮಟ್ಟದಲ್ಲಿ ಅಧಿಕಾರ ಕೊಟ್ಟಿಲ್ಲ, ಅಂತ ಹೇಳುವುದು ನೂರಕ್ಕೆ ನೂರು ಸರಿಯಲ್ಲ. ಏಕೆಂದರೆ ಅದೇ ಅಧಿಕಾರ, ಅದೇ ಸೂಪರ್‌ವಿಶನ್ ಅಂಡ್ ಕಂಟ್ರೋಲ್, ಅದೇ ಪದಗಳನ್ನು ನಾವು ಮೂರು ಮಟ್ಟದಲ್ಲಿ ಉಪಯೋಗಿಸಿದ್ದೇವೆ. ಅದನ್ನು ಬೇಕಾದರೆ ನಾನು ತೋರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಂದು ಅತೀ ಮುಖ್ಯವಾಗಿ ಪ್ರಸ್ತಾಪ ಮಾಡಬೇಕಾದ ವಿಷಯ ಬಂದಿದೆ. ಇವತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಾ ಇದೆ. ಜೀವಶಾಸ್ತ್ರ ಪ್ರಶ್ನೆ ಪತ್ರಿಕೆಗಳು ಬಯಲಾಗಿ ಹೋಗಿವೆ. ಬೀದಿ ಬೀದಿಯಲ್ಲಿ ಮಾರಾಟ ಆಗುತ್ತಿದೆ.

ಶ್ರೀ ಬಾಬಾ ಗೌಡ ರುದ್ರಗೌಡ ಪಾಟೀಲ್ : 150 ರೂಪಾಯಿಗೆ ಮಾರಾಟ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈಗ ತಾನೇ ನಡೆಯುತ್ತಿರುವುದು. ಮೂರು ಗಂಟೆಗೆ ಪರೀಕ್ಷೆ ನಡೆಯುವುದು. ಈಗ ಪ್ರಶ್ನೆ ಪತ್ರಿಕೆಗಳು ಹೊರಗೆ ಬಂದಿದೆಯೆಂದು ತಮ್ಮ ಗಮನಕ್ಕೆ ತರಬೇಕಾಗಿದೆ. ಏಕೆಂದರೆ ಇದು ಅತಿ ಮುಖ್ಯವಾದಂತಹ ಪ್ರಶ್ನೆ. ಇಲ್ಲೇ ತಂದು ಕೊಡುತ್ತಿದ್ದಾರೆ. ತಮ್ಮ ಗಮನಕ್ಕೆ ತರದೇ ನಾವು ಬೇರೆ ಏನು ಮಾಡಬೇಕಾಗುತ್ತದೆ.

ಶ್ರೀ ಕೆ ಎಸ್ ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, 15 ದಿವಸದ ಮುಂಚೆ ಇದೇ ವಿಚಾರವನ್ನು ಸಭೆಯ ಗಮನಕ್ಕೆ ತಂದಿದ್ದೆ.

(ಗೊಂದಲ)

ಉಪಾಧ್ಯಕ್ಷರು : ಎರಡು ನಿಮಿಷ ಕುಳಿತುಕೊಳ್ಳಿ. ಅವರು ಮುಗಿಸಿಬಿಡಲಿ. ಆಮೇಲೆ ವಿದ್ಯಾ ಮಂತ್ರಿಗಳನ್ನು ಕರೆದು ಕೇಳೋಣ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮೂರು ಗಂಟೆಗೆ ಪರೀಕ್ಷೇ ಇದೆ.

ಉಪಾಧ್ಯಕ್ಷರು : ಇದು ಜೀರೋ ಅವರ್ ಅಲ್ಲ. ಮತ್ತೆ ಈ ತರಹ ಮಧ್ಯೆ ಮಧ್ಯೆ ಎದ್ದು ಮಾತನಾಡಿದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು : ವೈ.ಕೆ. ರಾಮಯ್ಯನವರದ್ದು ಮುಗಿದು ಹೋಗಲಿ ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಕುಳಿತುಕೊಳ್ಳುತ್ತೇನೆ. ಮೂರು ಗಂಟೆಗೆ ಪರೀಕ್ಷೇ ಇದೆ.

ಉಪಾಧ್ಯಕ್ಷರು : ವಾಟಾಳ್ ನಾಗರಾಜ್ ಅವರೇ, ಮಾನ್ಯ ಶಿಕ್ಷಣ ಸಚಿವರು ಈಗ ತಾನೇ ಹೊರಗಡೆ ಹೋಗಿದ್ದಾರೆ, ಕರೆಸುತ್ತೇನೆ. ದಯಮಾಡಿ ಕುಳಿತುಕೊಳ್ಳಿ. ಅವರದ್ದು ಮುಗಿಸಲಿ.

ಶ್ರೀ ಕೆಎಸ್ ಈಶ್ವರಪ್ಪ : ಇದು ಬಹಳ ಮುಖ್ಯವಾದ ವಿಷಯ.

ಉಪಾಧ್ಯಕ್ಷರು : ಈಗ ಶಿಕ್ಷಣ ಸಚಿವರು ಇಲ್ಲ. ನೀವು ಎದ್ದ ತಕ್ಷಣ ಉತ್ತರ ಕೊಡುವುದಕ್ಕೆ ಶಿಕ್ಷಣ ಸಚಿವರು ಇಲ್ಲ. ಆ ಸದನಕ್ಕೆ ಹೋಗಿರಬಹುದು. ದಯಮಾಡಿ ಕುಳಿತುಕೊಳ್ಳಿ, ಅವರನ್ನು ಕರೆಸುತ್ತೇನೆ. ಅವರು ಬಂದ ತಕ್ಷಣ ಪ್ರಸ್ತಾಪ ಮಾಡಿ. ರಾಮಯ್ಯನವರೇ, ತಾವು ಮುಂದುವರಿಸಿ.

ಶ್ರೀ ವೈ ಕೆ ರಾಮಯ್ಯ : ನಾನು ಆಗಲೇ ಹೇಳಿದ ಹಾಗೆ ನಾನು ಪೂರ್ತಿಯಾಗಿ ಓದಿಕೊಂಡು ಬಂದಿದ್ದೇನೆ. ಈ ವಾದವನ್ನು ಅವರು ಅವತ್ತಿನಿಂದ ಇಲ್ಲಿ ಹೇಳುತ್ತಲೇ ಇದ್ದಾರೆ. If that is the case, ಅವರು ನಮಗೆ ಇಷ್ಟು ಹೇಳಿದರೆ, ಮಂಡಲ್ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳಿಗೆ ಏನು ಅಧಿಕಾರವನ್ನು ಕೊಡಲಿಕ್ಕೆ ಅವಕಾಶವನ್ನು ಮಾಡಿದ್ದೀರೋ ಅದೇ ಪ್ರಾವಿಜನ್ ಅನ್ನು ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತಿಗಳಿಗೆ ರಿಪೀಟ್ ಮಾಡುತ್ತೇವೆ ಎಂದು ಹೇಳಿಬಿಡಲಿ. I have no arguments as far as I am concerned. ಅದನ್ನು ಹೇಳಬೇಕು. No.I will show the difference. I repeat. far as the Zilla Parishad and Taluk Board is concerned, ನೀವು ಚುನಾಯಿತ ಪ್ರತಿನಿಧಿಗಳಿಗೆ ಅವಕಾಶವನ್ನು ಕೊಟ್ಟಿಲ್ಲ. ಅದಕ್ಕೆ ಹೊರಗಡೆ ಜನ ಏನು ಮಾತನಾಡುತ್ತಿದ್ದಾರೆಂದರೆ ಮಂಡ್ಲಲ್ ಪಂಚಾಯತಿಗಳಲ್ಲಿ ಸಣ್ಣ ಪುಟ್ಟ ಅಧಿಕಾರಿಗಳು ಇದ್ದಾರೆ ಪರವಾಗಿಲ್ಲ. ಆದರೆ ಜಿಲ್ಲೆ ಮತ್ತು ತಾಲ್ಲೂಕು ಲೆವೆಲಿನಲ್ಲಿ ದೊಡ್ಡ ಐಎಎಸ್ ಅಧಿಕಾರಿಗಳು ಇರುತ್ತಾರಲ್ಲ. ಅಂತ ಜನ ಮಾತಾಡುತ್ತಿದ್ದಾರೆ, ನನಗೆ ಗೊತ್ತಿಲ್ಲ. That is why I am questioning your statement that your commitment to the decentralisation is total and complete. ಪಂಚಾಯಿತಿಗಳಿಗೆ ನೀವು ಏನು ಅಧಿಕಾರ ಕೊಟ್ಟಿದ್ದೀರೋ ಚುನಾಯಿತ ಪ್ರತಿನಿಧಿಗಳಿಗೆ ಅದೇ ಅಧಿಕಾರವನ್ನು ತಾಲ್ಲೂಕು ಸಮಿತಿ ಮತ್ತು ಜಿಲ್ಲಾ ಪರಿಷತ್ತುಗಳಿಗೂ ಕೊಡುವುದಾದರೆ ನನ್ನ ವಾದವನ್ನು ಇಲ್ಲೇ ಮೊಟಕು ಮಾಡುತ್ತೇನೆ. ನಾನು ತಮಗೆ ಸೆಕ್ಷನ್ 62 (2) ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾನು ತಿಳಿದುಕೊಂಡಿದ್ದು ತಪ್ಪೋ, ಇವರು ಹೇಳುವುದು ಸರಿಯೋ ನನಗೆ ಗೊತ್ತಿಲ್ಲ. ನನ್ನ ದೃಷ್ಟಿಯಲ್ಲಿ ನೀವು 11ನೇ ಸೆಕ್ಷನ್ ನೋಡಿದರೆ ಇವರು ಹೇಳುವ ಹಾಗೆ ಮಂಡಲ್ ಪಂಚಾಯತಿಗಳಿಗೆ ನಮಗಿಂತ ಹೆಚ್ಚು ಅಧಿಕಾರವನ್ನು ಯಾವ ಅರ್ಥದಲ್ಲಿ ಕೊಟ್ಟಿದ್ದಾರೆ ಎಂದು ದಯಮಾಡಿ ತಿಳಿಸಬೇಕು. ಕಾರಣ ಏನು ಎಂದರೆ ಸೆಕ್ಷನ್ 111ರಲ್ಲಿ ಕಾರ್ಯದರ್ಶಿಯ ನೇಮಕ ಸರ್ಕಾರದ ಕೈಯಲ್ಲಿದೆ. ಅದ್ದರಿಂದ ಪರಿಪೂರ್ಣವಾದ ಅಧಿಕಾರ ಸರ್ಕಾರದ ಕೈಯಲ್ಲಿ ಇದೆ. ನೀವು ಹೆಚ್ಚು ಕೊಟ್ಟಿದ್ದೀರಿ ಎಂದು ವಾದ ಮಾಡುತ್ತಿದ್ದೀರಿ. I want to get myself enlightened on this question."

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೆ, ನನ್ನ ಭಾವನೆ ಇಷ್ಟೇ, ನಾನು ಆಗಲೇ ಹೇಳಿದ್ದೇನೆ. ಬೇರೆಯವರ ಭಾವನೆಯಲ್ಲಿ ಏನು ಇದೆಯೋ ನನಗೆ ಗೊತ್ತಿಲ್ಲ. ಗ್ರಾಮ ಪಂಚಾಯಿತಿಯ ಅಧ್ಯಕ್ಷನು ಅಧಿನಿಯಮ ಯಾವುದೇ ಇತರ ಉಪಬಂಧದ ಅಥವಾ ಅದರಡಿಯಲ್ಲಿ ರಚಿಸಿರುವ ನಿಯಮದಡಿಯಲ್ಲಿ ಚಲಾಯಿಸಬಹುದಾದ ಪ್ರಕಾರ್ಯಗಳು ಮತ್ತು ಅಧಿಕಾರದ ಜೊತೆಗೆ ಗ್ರಾಮ ಪಂಚಾಯತಿಯ ಸಭೆಗಳನ್ನು ಕರೆಯತಕ್ಕದ್ದು. ಗ್ರಾಮ ಪಂಚಾಯತಿಯ ದಾಖಲೆಯನ್ನು ನೋಡುವ ಅವಕಾಶ ಇರತಕ್ಕದ್ದು ಮತ್ತು ಗ್ರಾಮ ಪಂಚಾಯತಿಯ ಅಧಿಕಾರಿಗಳ ಮತ್ತು ನೌಕರರುಗಳು ಮೇಲೆ ಮೇಲ್ವಿಚಾರಣೆ ನಡೆಸತಕ್ಕದ್ದು ಮತ್ತು ನಿಯಂತ್ರಣ ಹೊಂದತಕ್ಕದ್ದು. ಸ್ವಾಮಿ, ನೀವು ಜಿಲ್ಲಾ ಪರಿಷತ್ತನ್ನು ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೂ ಅಳವಡಿಸಿಸುತ್ತೀರಾ ? ಗ್ರಾಮ ಪಂಚಾಯಿತಿ ಅಧಿಕಾರ ಮತ್ತು ನೌಕರರ ಕಾರ್ಯಗಳ ಮೇಲ್ವಿಚಾರಣೆ ನಡೆಸತಕ್ಕದ್ದು, ಮತ್ತು ನಿಯಂತ್ರಣ ಹೊಂದಿರತಕ್ಕದ್ದು. ಇದು ಜಿಲ್ಲಾ ಪರಿಷತ್ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲೂ ಇಲ್ಲ.ಅಲ್ಲದೆ ಜಿಲ್ಲಾ ಪಂಟಾಯಿತಿ ಮತ್ತು ತಾಲ್ಲೂಕು ಸಮಿತಿಗಳಲ್ಲೂ ಇಲ್ಲ "ಅಧ್ಯಕ್ಷರು ಸಮಿತಿ ಅಥವಾ ಗ್ರಾಮ ಪಂಚಾಯಿತಿ ಮುಂಚಾರಾತಿ ಅಗತ್ಯವಿರುವಂಥ ಯಾವುದೇ ಕಾಮಗಾರಿಯನ್ನು ತಕ್ಷಣ ನಿಲ್ಲಿಸುವುದು ಅಥವಾ ಯಾವುದೇ ಕಾರ್ಯವನ್ನು ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವೆಂದು ಅಭಿಪ್ರಾಯ ಪಟ್ಟರೆ ಆ ಉದ್ದೇಶಕ್ಕಾಗಿ 24 ರಂತೆ ನೋಟೀಸ್ ಕೊಟ್ಟು ಸಭೆ ಕರೆಯುವುದು." ಆದರೆ ಇಂಥದ್ದೇ ಒಂದು ಸೂಪರ್‌ವಿಶನ್ ಆಂಡ್ ಕಂಟ್ರೋಲನ್ನು .....

ಶ್ರೀ ಎಂ. ವೈ. ಘೋರ್ಪಡೆ : ತಾವು ದಯವಿಟ್ಟು ಸೆಕ್ಷನ್ 152ನೇ ಸಿ ಮತ್ತು ಡಿ ಕ್ಲಾಸ್ ನೋಡಿ. ಅದರಲ್ಲಿ 'Powers and duties of the Adhyaksha' ಎಂದು ಇದೆ. They exercise supervision and control over the Executive Officer. ಇದು ನಾನು ತಾಲ್ಲೂಕು ಮಟ್ಟದಲ್ಲಿರುವಂತೆ ಹೇಳುತ್ತಿದ್ದೇನೆ.

"(c) exercise supervision and control over the Executive Officer .....etc

(d) exercise overall supervision over the financial and executive administration of the Taluk Panchayat ...etc

ಸೆಕ್ಷನ್ 193ರ (ಸಿ) ಮತ್ತು (ಡಿ) ಕ್ಲಾಸ್ ನೋಡಿ, ಇದು ಜಿಲ್ಲಾ ಪಂಚಾಯಿತಿಗೆ ಸಂಬಂಧಪಟ್ಟಿದ್ದು.

'Power and Duties of the Adhyaksha'

"(c) exercise such administrative supervision and control over the Chief Executive Officer for securing implementation of resolutions or decisions of the Zilla Panchayat or of the Standing Committees which are not inconsistent with the provisions of this Act.....

(d) exercise overall supervision over the financial and executive administration of the Zilla Panchayat and place before the Zilla Panchayat..etc ಇದೇನಿದೆ, ಸ್ವಲ್ಪ ಸ್ಪಷ್ಟವಾಗಿ ಬರೆದಿದ್ದೀವಷ್ಟೆ. ಆದರೆ, ಇದರಲ್ಲಿ crucial words are 'Supervision and control' ಈ ಶಬ್ದಗಳು ಮೂರು ಮಟ್ಟದಲ್ಲಿವೆ. ಮತ್ತು ಅದರಲ್ಲಿ ಸ್ವಲ್ಪ ಬಾಷೆಯ ವ್ಯತ್ಯಾಸಕ್ಕೆ ನೀವು ಬೇರೇನೂ ಅರ್ಥ ಕೊಡಬೇಕಾಗಿಲ್ಲ.The Government is very clear that supervision and control should be exercised by the elected body at all the three levels. ಅದಕ್ಕಾಗಿ ನೀವು ಸುಮ್ಮನೆ ಬೇರೆ ಅರ್ಥ ಕಲ್ಪಿಸಿಕೊಂಡು, ಅದನ್ನು ಬೆಳಿಸುವುದು ಬೇಡವೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : SSLC ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಬಯಲಾಗಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಸದನಕ್ಕೆ ಮಾನ್ಯ ಶಿಕ್ಷಣ ಮಂತ್ರಿಗಳು ಬಂದಿದ್ದಾರೆ. ಪ್ರಶ್ನೆ ಪತ್ರಿಕೆಗಳು ಬಯಲಾಗಿವೆ. ಇದರ ಬಗ್ಗೆ ಆವರು ಯಾವ ಕ್ರಮ ತೆಗೆದುಕೊಳುತ್ತಾರೆ ? ಪರೀಕ್ಷೆಯನ್ನು ಮಂದಕ್ಕೆ ಹಾಕುತ್ತಾರಾ ಎಂಬುದನ್ನು ತಿಳಿಸಬೇಕು.

ಶ್ರೀ ರುಕ್ಮಯ್ಯ ಪೂಜಾರಿ : ಪರೀಕ್ಷೆಯನ್ನು ಮುಂದೆ ಹಾಕುವುದಿಲ್ಲ, ಏಕೆ ಈ ರೀತಿಯಾಗುತ್ತಿದೆ ?

ಶ್ರೀ ಕೆ.ಎಸ್.ಈಶ್ವರಪ್ಪ : ಈ ವಿಚಾರವನ್ನು ನಾನು 15 ದಿವಸಗಳ ಹಿಂದೆಯೇ ಸದನದಲ್ಲಿ ಪ್ರಸ್ತಾಪಿಸಿದ್ದೆ. 8 ಮತ್ತು 9 ನೇ ತರಗತಿಗಳ ಪರೀಕ್ಷಾ ಪ್ರಶ್ನೆ ಪತ್ರಿಕೆಗಳು ಹೊರ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ, ಇದಕ್ಕಾಗಿ ನಾವು ಜಾಗೃತದಳವನ್ನು ನಿರ್ಮಾಣ ಮಾಡಿದ್ದೇವೆ, ಇದರ ಮುಖಾಂತರ ಇಡೀ ರಾಜ್ಯದಲ್ಲಿ ಎಸ್ಎಸ್ಎಲ್ಸಿ, ಪಿಯುಸಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಹೊರಗೆ ಬರುವುದಕ್ಕೆ ಬಿಡುವುದಿಲ್ಲ ವೆಂದು ಹೇಳಿದರು. ಆದರೂ ಇವೊತ್ತು ಪ್ರಶ್ನೆ ಪತ್ರಿಕೆ ಬಯಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಇದರ ವಿಷಯ ಸದನದಲ್ಲಿ ಮೊದಲಿನಿಂದಲೂ ಕೇಳಿ ಬರುತ್ತದೆ, ನಾವು ಹೇಳುತ್ತಲೇ ಇದ್ದೇವೆ, ಇದಕ್ಕಾಗಿ ರಚಿಸಲಾಗಿದ್ದ ಜಾಗೃದ ದಳ ಏನಾಯಿತು ? ಸರ್ಕಾರ ಇದರ ಕಡೆ ಗಮನ ಕೊಟ್ಟಿದೆಯೆ? ಪ್ರಶ್ನೆ ಪತ್ರಿಕೆಗಳು ಪರೀಕ್ಷೆ ನಡೆಯುವುದಕ್ಕಿಂತ ಮುಂಚೆ ಬಯಲಾದರೆ ಚೆನ್ನಾಗಿ ಓದುತ್ತಿರತಕ್ಕಂಥ ವಿದ್ಯಾರ್ಥಿಗಳ ಪರಿಸ್ಥಿತಿ ಏನು ? ಒಂದು ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆ ಬೀದಿಯಲ್ಲಿ 150 ರೂಪಾಯಿಗಳಂತೆ ಮಾರಾಟವಾಗುತ್ತಿದೆ.

ಡಾ : ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು) :ಮಾನ್ಯ ಅಧ್ಯಕ್ಷರೇ, ಎಸ್ಎಸ್ಎಲ್ಸಿ, ಪರೀಕ್ಷೆ ಪ್ರಾರಂಭವಾಗುವುದಕ್ಕಿಂತ ಮುಂಚೆ ನಾವು ವಿರೋಧ ಪಕ್ಷಗಳ ಎಲ್ಲಾ ನಾಯಕರುಗಳನ್ನು, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಿದ್ದೆವು....

ಶ್ರೀ ವಾಟಾಳ್ ನಾಗರಾಜ್ : ನಮಗೆ ಯಾವುದೂ ಪತ್ರ ಬಂದಿಲ್ಲ, ಯಾವುದೇ ಸಭೆಗೆ ನಮ್ಮನ್ನು ಕರೆದಿಲ್ಲ. ಏಕೆ ತಾವು ಈ ರೀತಿ ಮಾತನಾಡುತ್ತಿದ್ದೀರಿ? ನಮ್ಮನ್ನು ಯಾವೊತ್ತು ಕರೆದಿದ್ದಿರಿ ? ಒಬ್ಬರನ್ನೂ ಕರೆದಿಲ್ಲ, ಒಂದು ದಿವಸವೂ ಸಭೆ ಕರೆದಿಲ್ಲ.

ಡಾ : ಹೆಚ್.ಡಿ.ಲಮಾಣಿ : ನಾನು ಸಭೆ ಕರೆದಿದ್ದಂತೂ ನಿಜ, ಎಲ್ಲರಿಗೂ ನೋಟೀಸ್ ಕಳುಹಿಸಿದ್ದೇನೆ. ಆದರೆ, ಸಭೆಗೆ ಬರದಿರುವುದು ಬೇರೆ ವಿಷಯ.

ಶ್ರೀ ವಾಟಾಳ್ ನಾಗರಾಜ್ : ಇದು ಸತ್ಯಕ್ಕೆ ದೂರವಾದಂಥ ಮತ್ತು ಯಾವೊತ್ತು ನೀವು ಸಭೆ ಕರೆದಿದ್ದೀರಿ ? ಒಂದೂ ಪತ್ರವೂ ನಮಗೆ ಬಂದಿಲ್ಲ ಅಥವಾ ನಮ್ಮ ಸಹಿಯನ್ನಾದರೂ ತೆಗೆದುಕೊಳ್ಳಬೇಕು ತಾನೇ ?

ಡಾ : ಹೆಚ್.ಡಿ.ಲಮಾಣಿ : ನಾನು ಹೇಳುತ್ತಿರುವಂತಹ ಮಾತಿನ ಅರ್ಥವಿಷ್ಟೆ; ನಾನು ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಅಧಿಕಾರಿಗಳನ್ನು ಕರೆಸಿ ಈ ಹಿನ್ನೆಲೆಯಲ್ಲಿ ಎಲ್ಲಾ ರೀತಿಯ ಪ್ರಿಕಾಷನರಿ ಮೆಜರ್ಸ್ ತೆಗೆದುಕೊಂಡಿದ್ದೇನೆ. ಏಕೆಂದರೆ, ಒಂದೊಂದು ವೇಳೆ ಗೆಸ್ ಕೊಶ್ಚನ್ಸ್ ಎನ್ನುವ ಪ್ರಶ್ನೆಪತ್ರಿಕೆ ಹೊರ ಬರುತ್ತದೆ. ಇದರ ಬದಲು ಪ್ರಶ್ನೆಪತ್ರಿಕೆ ನಿಜವಾಗಿಯೂ ಬಯಲಾಗಿದ್ದರೆ ನಾನು ಅನಿವಾರ್ಯವಾಗಿ ಪರೀಕ್ಷೆಯನ್ನು ಮುಂದಕ್ಕೆ ಹಾಕಬೇಕಾಗುತ್ತದೆ. ಏಕೆಂದರೆ ತಾವು ಇದರ ಬಗ್ಗೆ ಈಗಾಗಲೆ ಹೇಳಿದ್ದೀರಿ. ನಾನು ಆ ಸುದ್ದಿ ಮುಟ್ಟಿದ ಕೂಡಲೇ ಆಲ್ಲಿಗೆ ಅಧಿಕಾರಿಗಳನ್ನು ಕಳಿಸಿದ್ದೇನೆ. ಅವರು ಒಂದು ವೇಳೆ ಈ ರೀತಿ ಪತ್ರಿಕೆ ಬಯಲಾಗಿರುವುದು ನಿಜವೆಂದು ಹೇಳಿದರೆ ನಾನು ಪರೀಕ್ಷೆಯನ್ನು ಮುಂದಕ್ಕೆ ಹಾಕುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಪರೀಕ್ಷೆಯನ್ನು ಮುಂದೆ ಹಾಕುವುದು ಬೇರೆ ವಿಚಾರ. ವಿದ್ಯಾರ್ಥಿಗಳು ರಾತ್ರಿ ಹಗಲು ಓದಿಕೊಂಡು ಬಂದಿರುತ್ತಾರೆ. ಇವರ ಬೇಜವಾಬ್ದಾರಿಯಿಂದ ಹಗಲೂ ರಾತ್ರಿ ಕಷ್ಟಪಟ್ಟು ಓದಿಕೊಂಡಿರತಕ್ಕ ವಿದ್ಯಾರ್ಥಿಗೆ ಮತ್ತೆ ಮತ್ತೆ ಪರೀಕ್ಷೆ ಮಾಡುವುದರ ಮೂಲಕ ಅವರಿಗೆ ಶಿಕ್ಷೆಯನ್ನು ಕೊಡುವುದು ಯಾವ ನ್ಯಾಯ?